

ಕಿಶನ್ ಖನ್ನಾ ಅವರ ಕಲಾಕೃತಿ 'ಗಾಂಧಿಯ ಸಾವಿನ ಸುದ್ದಿ'

ಛಾಯಾಚಿತ್ರಗಳು ಪ್ರಸಿದ್ಧ). ಗಣೇಶನನ್ನು ಗಲ್ಲಿಗಳಲ್ಲಿ ಕೊರೊನಾ ಕಾಲದಲ್ಲಿಯೂ ಸ್ಥಾಪಿಸಿದಂತೆ, ಭಾರತೀಯರ ಎಫ್.ಬಿ. ಪೋಸ್ಟ್‌ಗಳಲ್ಲಿ ಒಂದಲ್ಲಾ ಒಂದು ರೀತಿ ಗಾಂಧಿ ಇದ್ದೇ ಇರುತ್ತಾರೆ.

ಆದರೆ ಇಲ್ಲಿಯವರೆಗೂ ಗಾಂಧೀಜಿ ಅತ್ಯಂತ ಮೌಲ್ಯಾಧಾರಿತವಾಗಿ, ಸುದೀರ್ಘವಾಗಿ ನಿರೂಪಿತವಾಗಿರುವುದು, ಅಕ್ಷರಶಃ ಬೆಲೆಯುಳ್ಳವರಾಗಿ ಉಳಿದುಕೊಂಡು ಬಂದಿರುವುದು ರೂಪಾಯಿ ನೋಟುಗಳ ಮೇಲೆಯೇ! 1969ರಲ್ಲಿ, ಚಂದ್ರನ ಮೇಲೆ ಮಾನವ ಮೊದಲ ಹೆಜ್ಜೆಯಿರಿಸಿದ ವರ್ಷದಲ್ಲಿ ಒಂದು ರೂಪಾಯಿ ನೋಟಿನ ಮೇಲೆ ಗಾಂಧಿಗೆ ಸ್ಥಾನ ದೊರಕಿತು. ತದನಂತರ ಹತ್ತು, ಐನೂರು ರೂಗಳು ಮತ್ತು ನಾಣ್ಯಗಳ ಮೇಲೆ ಗಾಂಧಿ ವಿರಾಜಮಾನರಾಗಿದ್ದಿದೆ. ಇದರೊಂದಿಗೆ ರಾಮ್ ಸುತಾರ್ ಅವರು ರೂಪಿಸಿರುವ ನವದೆಹಲಿಯಲ್ಲಿನ ಪಂಚಲೋಹದ ಗಾಂಧಿ ಪ್ರತಿಮೆ ಒಂದು ಔಪಚಾರಿಕ ನಿರೂಪಣೆ ಎನ್ನಿಸಿಬಿಟ್ಟಿದೆ. ಒಂದು ವ್ಯಕ್ತಿತ್ವದ ಈ ಎರಡೂ ನಿರೂಪಣೆಗಳು ಇನ್ನಿಲ್ಲದಂತೆ ಪುನರಾವರ್ತನೆಗೊಳ್ಳುತ್ತಲೇ ಇವೆ, ಇಂದಿಗೂ.

★★★

ಹೋಮಾಯ್ ವ್ಯಾರವಾಲ ಎಂಬ ಮುಂಬಯಿಯ ಛಾಯಾಗ್ರಾಹಕಿ ಗಾಂಧಿಯವರ ಪ್ರಾರ್ಥನೆಯನ್ನು ಕ್ಲಿಕ್ಕಿಸಲು ಸೈಕಲ್ಲಿನಲ್ಲಿ ಹೋಗುತ್ತಿದ್ದಾಗ, ಏನೋ ಅವಸರದ ಕೆಲಸವಿದೆ ಎಂದು ಅವರ ಪತಿ ಅವರನ್ನು ಹಿಂದಕ್ಕೆ ಕರೆಸಿಕೊಂಡರಂತೆ. ಪತಿಯ ಹೆಸರಿನಲ್ಲೇ ತನ್ನ ಛಾಯಾಚಿತ್ರಗಳನ್ನು ಪ್ರಕಟಿಸುತ್ತಿದ್ದ ಗಂಡುನಿರ್ಮಿತಿಯ ಕಾಲ ಅದಾಗಿತ್ತು. ಆಕೆ ಹಿಂದಿರುಗಿದ ಸ್ವಲ್ಪ ಹೊತ್ತಿನಲ್ಲೇ ಗಾಂಧಿಯನ್ನು ಹತ್ಯೆ ಮಾಡಲಾಗಿದೆ ಎಂಬ ಸುದ್ದಿ ಬಂದಿತ್ತು. ಇಂದಿರಾಗಾಂಧಿಯನ್ನು ಚಿತ್ರಿಸಲು ಕಿಟಕಿಯ ಮೂಲಕ ನಿಂತಿದ್ದ ರಷ್ಯನ್ ಛಾಯಾಚಿತ್ರಗ್ರಾಹಕನ ಕಥೆಯೂ ಇದೇ. ಚಹಾ ಕುಡಿಯುತ್ತಿದ್ದ ಆತನಿಗೆ ದುರಂತವನ್ನು ಹಿಡಿದಿರಿಸುವ ಅವಕಾಶ ತಪ್ಪಿತ್ತು. ತಂತ್ರಜ್ಞಾನಕ್ಕೂ ದುರಂತಗಳ ಕುರಿತಾದ ಒಂದು ಆತಂಕ ಇದ್ದೇ ಇರುತ್ತದೆ. ಗಾಂಧೀಜಿ ಬದುಕಿದ್ದಾಗಲೇ ಚಿತ್ರಕಲೆಯ ಒಂದು ಮುಖ್ಯ ವಸ್ತುವಾಗಿ ಒದಗಿಬಂದದ್ದಿದೆ. ತಮ್ಮನ್ನು ಹೇಗೆ ನಿರೂಪಿಸಲಾಗುತ್ತಿದೆ ಎಂಬುದರ ಬಗ್ಗೆ ಅವರಿಗೆ ಅತೀವ ಎಚ್ಚರವಿರುತ್ತಿತ್ತು, ಟ್ಯಾಗೋರರಂತೆ. ಸ್ವತಃ ಲೇಖಕರಾದವರಿಗೆ, ಸಂಪಾದಕರಾದವರಿಗೆ ಇದು ಅನಿವಾರ್ಯವೂ ಹೌದೇನೋ. ಸ್ವಲ್ಪ ಬಟ್ಟೆ ಕೊಳೆಯಾದರೂ, ಮಸಿ



ಎಂ.ಎಫ್. ಹುಸೇನರ ಗಾಂಧಿ ಚಿತ್ರ